ಕರ್ನಾಟಕ ಸರ್ಕಾರ

| | | |
|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 726 |
| 02 | ಸದಸ್ಯರ ಹೆಸರು | ಶ್ರೀ ಶಾಂತರಾಮ್ ಬುಡ್ನ ಸಿದ್ದಿ ವಿಧಾನ ಪರಿಷತ್ತಿನ ಸದಸ್ಯರು. |
| 03 | ವಿಷಯ | ಧಾರವಾಡ ಜಿಲ್ಲೆಯಲ್ಲಿರುವ ಧನಗರಗೌಳಿ ಜನಾಂಗದ ಕಂದಾಯ ಗ್ರಾಮಗಳ ಕುರಿತು. |
| 04 | ಉತ್ತರಿಸಬೇಕಾದ ದಿನಾಂಕ | 12/03/2025 |
| 05 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಧಾರವಾಡ ಜಿಲ್ಲೆಯಲ್ಲಿ ಕಾಡಿನಂಚಿನಲ್ಲಿ ವಾಸಿಸುವ ಧನಗರಗೌಳಿ ಜನಾಂಗದ ಎಷ್ಟು ಹಾಡಿಗಳಿವೆ; ಸದರಿ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಹಕ್ಕುಪತ್ರ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಧಾರವಾಡ ಜಿಲ್ಲೆಯಲ್ಲಿ ಕಾಡಿನಂಚಿನಲ್ಲಿ ವಾಸಿಸುವ ಧನಗರಗೌಳಿ ಜನಾಂಗದ 11 ಹಾಡಿಗಳಿವೆ (ಧಾರವಾಡ-2, ಅಳ್ನಾವರ-5 ಮತ್ತು ಕಲಘಟಗಿ-4).<br><br>ಸದರಿ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಹಕ್ಕು ಪತ್ರ ನೀಡುವ ಹಂತ ಈ ಮುಂದಿನಂತೆ ಇರುತ್ತದೆ.<br><br>ಧಾರವಾಡ ತಾಲ್ಲೂಕಿನಲ್ಲಿ 1) ಹುಣಸಿಕುಮರಿ ಕಂದಾಯ ಗ್ರಾಮವನ್ನಾಗಿಸಿ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. 2) ಉಡವನಾಗಲಾವಿ ಅರಣ್ಯ ಹಕ್ಕು ಸಮಿತಿಯಡಿ ಹಕ್ಕು ಪತ್ರ ವಿತರಣೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಅಳ್ನಾವರ ತಾಲ್ಲೂಕಿನಲ್ಲಿ 1) ಅಂಬೋಳಿ ಕಂದಾಯ ಗ್ರಾಮವನ್ನಾಗಿಸಿ ಹಕ್ಕುಪತ್ರ ವಿತರಿಸಲಾಗಿದೆ. 2) ಕೃಷ್ಣಗಿರಿ ಉಪಗ್ರಾಮಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ. 3) ಶಿವನಗರ, 4) ಲಿಂಗನಕೊಪ್ಪ ಮತ್ತು 5) ಮಡಕಿಕೊಪ್ಪ ಇವುಗಳು ಅರಣ್ಯ ಹಕ್ಕು ಸಮಿತಿಯಡಿ ಹಕ್ಕು ಪತ್ರ ವಿತರಣೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಕಲಘಟಗಿ ತಾಲ್ಲೂಕಿನಲ್ಲಿ 1. ಹವಳದ ಹಿಂಡಸಗೇರಿ ಮತ್ತು 2. ಬೈಚವಾಡ ಹಾಡಿಗಳು ಅರಣ್ಯ ಪ್ರದೇಶದ ವ್ಯಾಪ್ತಿ ಒಳಗಡೆ ಬರುತ್ತವೆ. 3. ತಂಬೂರ ಹಾಡಿಯು ಸ್ವಂತ ಮಾಲೀಕತ್ವದ ಶೇತ್ಕಿ ಜಮೀನಿನಲ್ಲಿ ಇರುತ್ತದೆ. 4. ಹುಲಗಿನಕೊಪ್ಪ ಹಾಡಿಯಲ್ಲಿ ಕೇವಲ 9 ಕುಟುಂಬಗಳು ವಾಸ ವಾಗಿರುತ್ತವೆ. ಈ ಕಾರಣಗಳಿಂದಾಗಿ ಹಾಗೂ ಸರ್ಕಾರದ ಮಾನದಂಡಗಳು ಪುರೈಸದೇ ಇರುವ ಕಾರಣಗಳಿಗಾಗಿ ಸದರಿ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ರಚನೆ ಮಾಡಿರುವುದಿಲ್ಲ. |
| ಆ) | ಬಾಕಿ ಉಳಿದಿರುವ ಹಾಡಿಗಳನ್ನು ಕಂದಾಯ ಗ್ರಾಮಗಳಾಗಿ ಮಾಡುವುದಕ್ಕೆ ಸರ್ಕಾರದ ಮುಂದಿನ ಕ್ರಮಗಳೇನು?(ಸಂಪೂರ್ಣವಾಗಿ ವಿವರಿಸುವುದು) | |

ಸಂಖ್ಯೆ: RC-CFS0ADMN/237/2024 (ಇ –1322625 )

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು